**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ .ಕೆ ಇವರು ನಿಯಮ 330ರ ಅಡಿ ನೀಡಿರುವ 06ನೇ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಉತ್ತರ.**

**ಪ್ರಶ್ನೆ:**

ರಾಜ್ಯದ "ಅನ್ನ ಭಾಗ್ಯ ಯೋಜನೆ" ಗೆ ಗ್ರಹಣ ಬಡಿದಿದೆ. ಕಳೆದ ಮೂರು ತಿಂಗಳಿಂದ ಯೋಜನೆಯ ಹಣ ಫಲಾನುಭವಿಗಳ ಖಾತೆಗೆ ಜಮೆಯಾಗಿಲ್ಲ. ಸರ್ವರ್ ಸೇರಿ ಕೆಲ ತಾಂತ್ರಿಕ ಸಮಸ್ಯೆಗಳು ಹಾಗೂ ವ್ಯವಸ್ಥೆಯ ನಿರ್ಲಕ್ಷ್ಯದಿಂದಾಗಿ ಬಿಪಿಎಲ್, ಅಂತ್ಯೋದಯ ಕಾರ್ಡ್‌ದಾರರ ಖಾತೆಗೆ ಹಣ ಹಾಕಿಲ್ಲ. ನೈಜ ಫಲಾನುಭವಿಗಳು ಹಣ ಪಡೆಯಲು ಒಂದಿಲ್ಲೊಂದು ತಾಂತ್ರಿಕ ಅಂಶಗಳು ನಿರಂತರವಾಗಿ ಅಡ್ಡಿಯಾಗುತ್ತಿವೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗಿರುವುದರಿಂದ ಯೋಜನೆಯ ಅನುಷ್ಠಾನದಲ್ಲಿ ಅನಗತ್ಯ ಹಾಗೂ ಅಕಾರಣವಾಗಿ ವಿಳಂಬವಾಗುತ್ತಿದ್ದು, ಸಕಾಲದಲ್ಲಿ ಯೋಜನೆಯ ಲಾಭ ಪಡೆಯುವುದರಿಂದ ಫಲಾನುಭವಿಗಳು ವಂಚಿತರಾಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ (AAY) ಮತ್ತು ಆದ್ಯತಾ ಪಡಿತರ ಚೀಟಿಗಳ (PHH) ಪ್ರತಿ ಫಲಾನುಭವಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ವಿತರಿಸಲಾಗುವ 5 ಕೆ.ಜಿ ಆಹಾರ ಧಾನ್ಯದೊಂದಿಗೆ ರಾಜ್ಯ ಸರ್ಕಾರದವತಿಯಿಂದ ಹೆಚ್ಚುವರಿಯಾಗಿ 5 ಕೆ. ಜಿ ಆಹಾರ ಧಾನ್ಯವನ್ನು ಸೇರಿಸಿ ಉಚಿತವಾಗಿ ವಿತರಿಸಲು ಆದೇಶಿಸಿದ್ದು, ಅಕ್ಕಿಯ ಅಲಭ್ಯತೆಯಿಂದಾಗಿ ಅಕ್ಕಿಯ ಬದಲಾಗಿ ಪ್ರತಿ ಕೆ.ಜಿ ಅಕ್ಕಿಗೆ ರೂ.34/- ರಂತೆ 5 ಕೆ.ಜಿಗೆ ರೂ.170/- ರಂತೆ ಪ್ರತಿ ಸದಸ್ಯರಿಗೆ ಅವರ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆ (DBT) ಮುಖಾಂತರ ಜುಲೈ-2023 ರಿಂದ ಪಾವತಿಸಲಾಗುತ್ತಿದೆ.

ಜುಲೈ – 2023 ರಿಂದ ಮೇ- 2024 ರವರೆಗೆ, ಅರ್ಹ ಫಲಾನುಭವಿಗಳಿಗೆ ಡಿಬಿಟಿ (DBT) ಮುಖಾಂತರ ಪಾವತಿ ಮಾಡಲಾಗಿರುವ ವಿವರಗಳು ಈ ಕೆಳಕಂಡಂತಿರುತ್ತದೆ:-

| ಕ್ರ. ಸಂ. | ಮಾಹೆ | ಫಲಾನುಭವಿಗಳ ಸಂಖ್ಯೆ | ವರ್ಗಾಯಿಸಲಾದ ಒಟ್ಟು ಮೊತ್ತ (ಕೋಟಿಗಳಲ್ಲಿ) |
|---|---|---|---|
| 1 | ಜುಲೈ – 2023 | 3,45,38,958 | 566.05 |
| 2 | ಆಗಸ್ಟ್ -2023 | 3,69,36,906 | 605.88 |
| 3 | ಸೆಪ್ಟಂಬರ್ – 2023 | 3,82,62,103 | 627.73 |
| 4 | ಅಕ್ಟೋಬರ್ – 2023 | 3,92,74,053 | 644.45 |
| 5 | ನವೆಂಬರ್ – 2023 | 3,97,14,391 | 651.73 |
| 6 | ಡಿಸೆಂಬರ್ – 2023 | 3,99,25,249 | 655.22 |
| 7 | ಜನವರಿ – 2024 | 4,02,43,966 | 660.5 |
| 8 | ಫೆಬ್ರವರಿ – 2024 | 4,08,87,361 | 671.13 |
| 9 | ಮಾರ್ಚ್ – 2024 | 4,09,34,896 | 671.91 |
| 10 | ಏಪ್ರಿಲ್ - 2024 | 4,07,55,079 | 668.96 |
| 11 | ಮೇ - 2024 | 4,07,76,390 | 669.31 (ಪ್ರಗತಿಯಲ್ಲಿರುತ್ತದೆ. |

ಪ್ರಸ್ತುತ K2 ಮತ್ತು e-gov DBT ತಂತ್ರಾಂಶದಲ್ಲಿ ಹಲವು ಬದಲಾವಣೆಗಳನ್ನು ತಂದಿರುವುದರಿಂದ ಸದರಿ ಬದಲಾವಣೆಗಳನ್ವಯ ಆಹಾರ ತಂತ್ರಾಂಶದಲ್ಲಿಯು ಸೂಕ್ತ ಬದಲಾವಣೆಗಳನ್ನು ಮಾಡಲು ಕ್ರಮವಹಿಸಲಾಗುತ್ತಿದೆ. ಪರಿಣಾಮವಾಗಿ ಏಪ್ರಿಲ್ ಮತ್ತು ಮೇ 2024 ಮಾಹೆಗಳ DBT ಮೊತ್ತವನ್ನು ಸಂದಾಯ ಮಾಡುವಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ. ಹಾಲಿ ಸದರಿ ಕಾರ್ಯವು ಮುಗಿದಿದ್ದು, ಏಪ್ರಿಲ್ 2024 ರ ಮಾಹೆಯ DBT ಕಾರ್ಯವು ಪೂರ್ಣಗೊಂಡಿದ್ದು, ಮೇ 2024 ಮಾಹೆಯ DBT ಕಾರ್ಯವು ಹಾಲಿ ಪ್ರಗತಿಯಲ್ಲಿರುತ್ತದೆ.

ಆನಾಸ 84 ಎಫ್.ಪಿ.ಪಿ 2024 (ಇ)

**(ಕೆ.ಹೆಚ್.ಮುನಿಯಪ್ಪ)**
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು